# ನವಿಲುಗನ್ನಡಿ

- ಹೊಸ ವರ್ಷದ ಮೊದಲ ಸಂಚಿಕೆಯ 'ಸಾಹಿತ್ಯ ಉತ್ಸವಗಳ ಸುತ್ತ...' ಲೇಖನಗಳಲ್ಲಿ ಲೇಖಕರು ವ್ಯಕ್ತಪಡಿಸಿದ ಅಭಿಪ್ರಾಯಗಳು ನಿಜ. ಈ ಲೇಖನಗಳು ನಮ್ಮಲ್ಲೂ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳುವಂತೆ ಮಾಡುತ್ತವೆ. ಮುಖಪುಟ ವಿನ್ಯಾಸ ಸರಳ–ಸುಂದರ.

**ವೀರೇಶ್ ಬಿ.ಎಂ.**

- ಅನುವಾದಿತ ಕಥೆಗಳು– 'ಒಂದು ಸಣ್ಣ ತಿದ್ದುಪಡಿ' (ಡಬ್ಲ್ಯು.ಡಬ್ಲ್ಯು.ಜೇಕಬ್ಸ್), 'ಕಲ್ಲಿನ ತೊಟ್ಟಿ' (ಪಾವಣ್ಣನ್) ಚೆನ್ನಾಗಿವೆ. 'ನನ್ನ ಓದು' ಉತ್ತಮ ಪ್ರಯತ್ನ.

**ರಮೇಶ ಬಿರಾದಾರ**

- 'ಸ್ಮೃತಿಬಿಂಬ' ಅಂಕಣದ ಚಿತ್ರ ನೋಡಿ ಸಂತಸಪಟ್ಟೆ. ಕವಿ ದ.ರಾ. ಬೇಂದ್ರೆಯವರ ಶಾಂತಮುಖ, ಕನ್ನಡ ಹೋರಾಟಗಾರ ವಾಟಾಳ್ ನಾಗರಾಜ್ ಅವರ ಟೋಪಿ ಇಲ್ಲದ ತಲೆಯ ಅಪರೂಪದ ಚಿತ್ರವಿದು.


**ಸುಬ್ಬಲಕ್ಷ್ಮಿ ಎಚ್.ಕೆ., ಕೋಲಾರ**

- ಕುಮುದಾ ಪುರುಷೋತ್ತಮ್ ಅವರ 'ಪೊರೆ ಕಳಚಿತು' ಪ್ರಬಂಧ ಚೆನ್ನಾಗಿದೆ. ಜೀವನದ ಕಠಿಣ ಮುಖವನ್ನು ಲಘುಶೈಲಿಯಲ್ಲಿ ನಿರೂಪಿಸಿದ್ದಾರೆ.

**ಪಿ. ಜಯವಂತ ಪೈ, ಕುಂದಾಪುರ**

- ಕೆ. ಅರವಿಂದ ಮಿತ್ರ ಅವರ ಕತೆ 'ಗುಳಿಕ ಕಾಲದ ಅತಿಥಿ' ಓದಿದೆ. ಕಾಲಗತಿಯ ವೇಗಕ್ಕೆ ನಮ್ಮ ಪೂರ್ವಿಕರ ಗೊಡ್ಡು ಸಂಪ್ರದಾಯಗಳ ಕಟ್ಟುಪಾಡು ಸಡಿಲವಾಗಬೇಕು ಎಂಬ ವಾದವನ್ನು ಕತೆಗಾರರು ಸೂಕ್ಷ್ಮವಾಗಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ.

**ಕೊಹಿಮ, ಬಸರಕೋಡು**




- ಸೈಯದ್ ಅಸಘರ್ ವಜಾಹತ್ ಅವರೊಂದಿಗಿನ ಮಾತು–ಕತೆ (ಸಂದರ್ಶನ: ರಹಮತ್ ತರೀಕೆರೆ) ಮಾಹಿತಿಪೂರ್ಣವಾಗಿದೆ. ಎಚ್.ಎಸ್. ರಾಘವೇಂದ್ರ ರಾವ್ ಅವರ ಲೇಖನ 'ಜುಟ್ಟಿಗೆ ಮಲ್ಲಿಗೆ(?) ಹೂವು' ಚಿಂತನಾರ್ಹ.

**ಗುರುಮೂರ್ತಿ ಪೆಂಡಕೂರು, ಬೆಂಗಳೂರು**

- ಮಾನಸಿಕವಾಗಿ ಚೈತನ್ಯ ಪುಟಿಯುತ್ತಿದ್ದರೂ ಶರೀರಕ್ಕೆ ಕಾಯಿಲೆ ಬಂದಾಗ ಮನುಷ್ಯ ಎಷ್ಟು ಅಸಹಾಯಕನಾಗುತ್ತಾನೆ ಎನ್ನುವುದನ್ನು ತೋರಿಸುವ, ಓದುಗರನ್ನು ಚಕಿತಗೊಳಿಸುವ ಕತೆ– 'ಪ್ರೀತೀನೇ ಹೀಗೆ'.

**ಕೆ. ಕೃಷ್ಣಕುಮಾರಿ, ಬೆಂಗಳೂರು**

- ವಿಷ್ಣು ಭಟ್ಟ ಹೊಸ್ಮನೆಯವರ ಕತೆ 'ತದ್ರೂಪಿ' ಮತ್ತು ಕೇಶವರೆಡ್ಡಿ ಹಂದ್ರಾಳರ ನೀಳ್ಗತೆ 'ಮೃಗಜಲ' ಆಕರ್ಷಿಸಿದವು. ಜೆ.ವಿ. ಕಾರ್ಲೊ ಅವರ ಅನುವಾದಿತ ಕತೆ 'ಒಂದು ಸಣ್ಣ ತಿದ್ದುಪಡಿ', ಕುಮುದಾ ಪುರುಷೋತ್ತಮ್ ಅವರ ಪ್ರಬಂಧ 'ಪೊರೆ ಕಳಚಿತು' ಈ ಸಂಚಿಕೆಯ ಖುಷಿ ಕೊಟ್ಟ ಬರಹಗಳು.

**ಸಂಧ್ಯಾ ಭಟ್, ಶ್ರುತಿ ಭಟ್, ಮುಂಬಯಿ**